ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಶವದ ಮೂಗಿನಲ್ಲೇಕೆ ಹತ್ತಿ ಇಡುತ್ತಾರೆ ಸರ್?*



ಅಪ್ಪಿತಪ್ಪಿ ಮತ್ತೆ ಉಸಿರಾಡದಂತೆ ತೆಗೆದುಕೊಳ್ಳುವ ಮುನ್ನೆಚ್ಚರಿಕೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಹೆಣ್ಣು ಹೆತ್ತವರು ಅತ್ತೆ ಇಲ್ಲದ ಮನೆಗೆ ಕೊಡಲು ತುಂಬಾ ಇಷ್ಟ ಪಡುವುದರ ರಹಸ್ಯ?*

ಅತ್ತೆ ಇಲ್ಲದಿದ್ದರೆ ಅತ್ತೇ ಅಳುವ ಸಂದರ್ಭ ಬಾರದೆಂದು!

ರಾಜೇಂದ್ರ ಇಂಗಳಗಿ, ರಾಮದುರ್ಗ

*ಇಲ್ಲೊಬ್ಬಳು ಭಿಕ್ಷಾನ್ನದಲ್ಲಿ ಸ್ವರ್ಗಸುಖವಿದೆ ಎನ್ನುತ್ತಾಳಲ್ಲಾ...?*

**frozen food** ತಿಂದು ಅಭ್ಯಾಸ ಆಗಿರುವವರಿಗೆ ಹೀಗೆನ್ನಿಸುವುದು ಅಚ್ಚರಿಯಲ್ಲ!

ನಿತ್ಯ ಎಸ್. ಮೂಡಬಿದಿರೆ

*ಗುರು, ಮಳೆಗಾಲದಲ್ಲಿ ಹುಟ್ಟೋ ಅಣಬೆಗೂ, ಹೊಸದಾಗಿ ಹುಟ್ಟೋ ರಾಜಕೀಯ ಪಕ್ಷಕ್ಕೂ ಏನಾದರೂ ನಂಟು?*




ಅಣಬೆ ಆಕಾರದಲ್ಲಿ ಛತ್ರಿ; ಪಕ್ಷ ಗುಣದಲ್ಲಿ ಛತ್ರಿ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಪ್ರೇಮಪತ್ರ ಪ್ರಣಯ ಬರೆಯುವ ಮಹಾಕಾವ್ಯವಾದರೆ ವಿಷಾದಪತ್ರ?*

ಆ ಮಹಾಕಾವ್ಯಕ್ಕೆ ಬಂದ ಕಟು ವಿಮರ್ಶೆ!

ಅಕ್ಷಯ ಜೈನ್, ಹೂವಿನಹಡಗಲಿ

*ನೀವು ಗೀರ್ವಾಣ ಭಾಷೆಯಲ್ಲಿ ಏಕೆ ಉತ್ತರಿಸುತ್ತೀರಿ?*

ಸು-ಸಂಸ್ಕೃತರು ಮೆಚ್ಚಲೆಂದು!

ಡೈರಿ ವಿಶ್ವನಾಥ್, ಬೆಂಗಳೂರು

*ನಿಮ್ಮ ಅಭಿಮಾನಿ ಸಂಘ ಸ್ಥಾಪಿಸಲೆ?*

ಸಂಘ ಬೇಡ, ಸಂಗ ಇರಲಿ.

ಪಿ.ಜೆ. ರಾಘವೇಂದ್ರ, ಮೈಸೂರು

*ನರಭಕ್ಷಕ ಪ್ರಾಣಿಗೂ, ಪ್ರಾಣಿಭಕ್ಷಕ ನರನಿಗೂ ಏನು ಅಂತರ?*

ನರಭಕ್ಷಕ ಪ್ರಾಣಿಯಿಂದ ಹೆಚ್ಚೆಂದರೆ ಕೆಲವು ಮನುಷ್ಯರು ಸತ್ತಾರು; ಪ್ರಾಣಿಭಕ್ಷಕ ನರನಿಂದ ಕಾಡುಗಳೇ ಖಾಲಿಖಾಲಿ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಒಂದೊಮ್ಮೆ ಸತ್ಯಹರಿಶ್ಚಂದ್ರ ಬದುಕಿದ್ದಿದ್ದರೆ...?*

ಇಂದಿನ ಕೋರ್ಟ್ ಕಲಾಪಗಳನ್ನು ಕಂಡು ಚಂದ್ರಮತಿಯ ಪತಿ ಮಂದಮತಿಯಾಗುತ್ತಿದ್ದ!

ಅನಿತಾ ವಿ. ಜೋಶಿ, ಧಾರವಾಡ

*ರಾಮಾವತಾರಕ್ಕೆ ರಾಮಾಯಣ ಎಂದು ಕರೆದರೆ ಕೃಷ್ಣಾವತಾರಕ್ಕೆ ಕೃಷ್ಣಾಯಣ ಎಂದು ಕರೆಯಬೇಕಿತ್ತಲ್ಲವೆ?*

ಹಾಗೆ ಹೆಸರಿಟ್ಟರೆ ಟೈಟಲ್ ಕಾರ್ಡ್ ಕೃತಿಚೌರ್ಯ ಎಂದು ವ್ಯಾಸರ ಮೇಲೆ ವಾಲ್ಮೀಕಿ ಕೇಸ್ ಹಾಕುವ ಭಯವಿತ್ತಂತೆ!

ಬಿ.ಎನ್. ಸೊಲ್ಲಾಪುರ, ಬೀದರ್

*ಕೆಲವು 'ಗುರು'ಗಳು ಇಪ್ಪತ್ತೊಂದು ಬೆರಳುಗಳಿಗೆ ಉಂಗುರ ತೊಡಿಸಿಕೊಳ್ಳುತ್ತಾರಂತೆ; ಹೇಗೆ ಸಾಧ್ಯ ಗುರು?*

ಏಕಾಗದು? ಇಪ್ಪತ್ತು ಅವರ ಆಶ್ರಮದ ಹೆಂಗಳೆಯರದು, ಒಂದು ಅವರದು!

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

*ವಿಧಾನಸೌಧದಲ್ಲಿ ಎಲ್ಲ ಅನುಕೂಲಗಳಿದ್ದರೂ ನಮ್ಮ ನಾಯಕರು ಪರಪ್ಪನ ಅಗ್ರಹಾರದತ್ತ ಮುಖ ಮಾಡುವುದೇಕೆ?*

ಈ ಪ್ರಚಂಡ ಶಿಷ್ಯನ ಚೋರಗುರುಗಳು ಅಲ್ಲೇ ಇರುವುದಂತೆ!

ಜಾಕೋಬ್ ಡಿಸೋಜ, ಕುರುವಳ್ಳಿ

*ಆತ್ಮ, ಪರಮಾತ್ಮ, ಪ್ರೇತಾತ್ಮ ಇವುಗಳಿಗಿರುವ ಭೇದವೇನು?*

ಯಾವ ರೂಪವಾದರೂ ಧರಿಸಬಲ್ಲ ಒಬ್ಬಟ್ಟಿನ ಕಣಕವೇ ಆತ್ಮ, ಹೂರಣವೇ ಪರಮಾತ್ಮ, ಡಯಾಬಿಟಿಸ್ ಪ್ರೇತಾತ್ಮ!

## ಬಹುಮಾನಿತ ಪ್ರಶ್ನೆ

ಎಸ್.ಜಿ. ಕರನಂದಿ, ವಿದ್ಯಾನಗರ

*ಆಧುನಿಕ ಹರಿಶ್ಚಂದ್ರನಿಗೂ, ಪುರಾಣದ ಹರಿಶ್ಚಂದ್ರನಿಗೂ ಏನು ವ್ಯತ್ಯಾಸ ಮಾಸ್ಟರೆ?*

ಆಧುನಿಕ ಹರಿಶ್ಚಂದ್ರ ಹೆಂಡತಿಯನ್ನು ಮಾರಲು ಹೋದರೆ ವಿಮೆನ್ಸ್ ಲಿಬ್‌ನಿಂದ ಛೀಮಾರಿ, ಧರಣಿ, ಚಳವಳಿ, ಕೇಸು, ಜೈಲು.....

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*'ಸರ್ಕಾರ' ಸ್ತ್ರೀಲಿಂಗವೋ, ಪುಲ್ಲಿಂಗವೋ?*

ಸ್ತ್ರೀಲಿಂಗವೇ; ಅದಕ್ಕೇ ಅದರತ್ತಲೇ ಎಲ್ಲರ ಗಮನ, ಎಲ್ಲರಿಗೂ ಆಕರ್ಷಣೆ!

ಎನ್.ಎಸ್. ಆನಂದ, ಕತ್ತರಗುಪ್ಪ

*ಎಡವಿದ ಕಾಲಿಗಿಂತ ಎಡವಿದ ನಾಲಗೆ ಅಪಾಯವಲ್ಲವೇ ಸ್ವಾಮಿ?*

'ಹೌದು' ಎಂದರಂತೆ ಎಡವೆಡವೆಡವಿದ ಎಡವೀರಪ್ಪನ ವಿರೋಧಿಗಳು!

ಮಂಚಾಲಿ ಗುರುರಾಜಾಚಾರು, ಬಳ್ಳಾರಿ

*ಬಿಸಿಲಿಲ್ಲ, ಮಳೆಯಿಲ್ಲ, ಚಳಿ ಇಲ್ಲ. ಛತ್ರಿ ಏಕೆ ಬೇಕು ಸರ್?*



ಸಾಲ ಇದೆಯಲ್ಲ!

ಸಡ್ಲಪಲ್ಲಿ ರಾಮಕೃಷ್ಣಾರೆಡ್ಡಿ, ಮಾರುತಿನಗರ

*ಬ್ರೆಡ್ ಜಾಮ್‌ಗೂ, ಟ್ರಾಫಿಕ್ ಜಾಮ್‌ಗೂ ಇರುವ ವ್ಯತ್ಯಾಸವೇನು?*

ಒಂದರಿಂದ ಫಾಸ್ಟ್ ಬ್ರೇಕ್, ಇನ್ನೊಂದರಿಂದ ಸ್ಪೀಡ್ ಬ್ರೇಕ್!

ಡಿ.ಎಸ್. ಪಂಕಜಸುಬ್ರಮಣ್ಯಂ, ಬೆಂಗಳೂರು

*ಕಲಿತ ವಿದ್ಯೆಯಿಂದ ಮತ್ತೊಬ್ಬರಿಗೆ ಸಹಾಯ ಮಾಡುವುದು ತಪ್ಪಾ?*

ಅದು ವಿದ್ಯೆಯನ್ನವಲಂಬಿಸಿರುತ್ತದೆ; ನೀವು ಪ್ರಿಂಟಿಂಗ್ ಕಲಿತಿದ್ದು, ನೋಟ್ ಪ್ರಿಂಟ್ ಮಾಡಲು ಇತರರಿಗೆ ಸಹಾಯ ಮಾಡಿದರೆ.....!

■ ರಾಮ್